ಅ) ಇಲ್ಲದಿದ್ದಲ್ಲಿ, ಈ ಲಸಿಕೆಯನ್ನು ಉಚಿತವಾಗಿ ಬಡ ಮಕ್ಕಳಿಗೆ ಹಾಕಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆಯೇ;

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಇಲ್ಲ

ಆ) 2002ರ ಅಕ್ಟೋಬರ್ ತಿಂಗಳಿಂದ, ಬೆಂಗಳೂರು ನಗರ ಕೊಳಚೆ ಪ್ರದೇಶಗಳಲ್ಲಿ ವಾಸವಿರುವ 0-1 ವರ್ಷ ವಯಸ್ಸಿನ 13,498 ಬಡ ಮಕ್ಕಳಿಗೆ ಹೆಪಟೈಟಿಸ್-ಬಿ ಲಸಿಕೆ ಹಾಕುವ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರದ ಕುಟುಂಬ ಕಲ್ಯಾಣ ಇಲಾಖೆ ಮತಿಯಿಂದ ಕೈಗೊಳ್ಳಲಾಗುತ್ತಿದೆ.

ಬೆಂಗಳೂರು ವಿಶ್ವವಿದ್ಯಾಲಯದ ಜಮೀನುಗಳ ವಿವರ

1214 (490) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು, (ಶಿವಾಜಿನಗರ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ವಿಶ್ವವಿದ್ಯಾಲಯದ ಒಡೆತನದಲ್ಲಿರತಕ್ಕ ಜಮೀನೆಷ್ಟು;

ಆ) ಇದರಲ್ಲಿ ಬೆಂಗಳೂರು ವಿಶ್ವವಿದ್ಯಾಲಯವು ಎಷ್ಟು ಎಕರೆ ಜಾಗವನ್ನು ಉಪಯೋಗಿಸಿಕೊಂಡಿದೆ;

ಇ) ಬೆಂಗಳೂರು ವಿಶ್ವವಿದ್ಯಾಲಯವು ಯಾವ-ಯಾವ ಸಂಸ್ಥೆ, ಸಂಘ, ಕಛೇರಿಗಳಿಗೆ ಎಷ್ಟು ಎಕರೆ ಜಾಗಗಳನ್ನು ನೀಡಿದೆ;

ಈ) ಈ ಜಮೀನುಗಳನ್ನು ಉಚಿತವಾಗಿ ನೀಡಿದೆಯೇ; ಅಥವಾ ಯಾವ ದರದಲ್ಲಿ ನೀಡಿದೆ.

ಉ) ಕಲಾ ಗ್ರಾಮ ನಿರ್ಮಿಸಲು ನೀಡಿರುವ ಜಾಗವೆಷ್ಟು ಹಾಗೂ ಅದಕ್ಕಾಗಿ ವಿಧಿಸಿದ ದರವೆಷ್ಟು?

ಡಾ।। ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) :

ಅ) 1111 ಎಕರೆ 30 ಗುಂಟೆ

ಆ) 771 ಎಕರೆ 19 ಗುಂಟೆ

ಇ) ವಿವರಗಳು ಒಂದನೇ ಅನುಬಂಧದಲ್ಲಿವೆ.

ಈ) ಸರ್ಕಾರಿ ಸಂಘ/ಕಛೇರಿಗಳಿಗೆ ಒಂದು ವರ್ಷಕ್ಕೆ ಒಂದು ಎಕರೆಗೆ ಒಂದು ರೂ.ನಿಂದ ಒಂದು ಸಾವಿರ ರೂ.ಗಳ ದರವನ್ನು ವಿಧಿಸಿ ಗುತ್ತಿಗೆಯ ಆಧಾರದ ಮೇಲೆ ನೀಡಲಾಗಿದೆ.

ಉ) 20 ಎಕರೆ ಭೂಮಿಯನ್ನು ಉಚಿತವಾಗಿ ನೀಡಲಾಗಿದೆ.

ಅನುಬಂಧ - Annexure

ಕ್ರಮ ಸಂಖ್ಯೆ Sl.No.	ಸಂಸ್ಥೆಯ ಹೆಸರು Name of the Organisation	ಜಮೀನಿನ ವಿಸ್ತೀರ್ಣ Extent of Land
1	ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೋರ್ಟ್ಸ್ (ದಕ್ಷಿಣ ಕೇಂದ್ರ) National Institute of Sports (South Centre)	81.20